**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಾಗಮಂಗಲ**

**ಉಪಸ್ಥಿತರುಃ ಶ್ರೀ ಶಿವರಾಜು ಹೆಚ್.ಎಸ್.**
**ಬಿ.ಎ.ಎಲ್., ಎಲ್.ಎಲ್.ಬಿ.,**
**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ನಾಗಮಂಗಲ.**

**ಕ್ರಿಮಿನಲ್ ಮೊಕದ್ದಮೆ ಸಂ.105/2022**

**ಫಿರ್ಯಾದುದಾರರುಃ** ಕರ್ನಾಟಕ ಸರ್ಕಾರದ ಪರವಾಗಿ
ಬೆಳ್ಳೂರು ಪೋಲಿಸ್ ಠಾಣೆ.

ವಿರುದ್ಧ

**ಆರೋಪಿತರುಃ**

1. ಮೋಹನ್ ಕುಮಾರ್ ಕೆ ಆರ್
ಬಿನ್ ರಾಮೇಗೌಡ,
ಸುಮಾರು 27 ವರ್ಷ,
ವಾಸಃ ಕಂಚಿನಕೋಟೆ ಗ್ರಾಮ,
ಬೆಳ್ಳೂರು ಹೋಬಳಿ,
ನಾಗಮಂಗಲ ತಾಲ್ಲೂಕು,
ಮಂಡ್ಯ ಜಿಲ್ಲೆ.

2. ಶಂಭುಲಿಂಗೇಗೌಡ ಬಿ ಜೆ.
ಬಿನ್ ಜವರೇಗೌಡ,
ಸುಮಾರು 38 ವರ್ಷ,
ವಾಸಃ ಬಾಣಸಂದ್ರ ಗ್ರಾಮ,
ಕಸಬಾ ಹೋಬಳಿ,
ತುರುವೇಕೆರೆ ತಾಲ್ಲೂಕು,
ತುಮಕೂರು.

**ದೋಷಾರೋಪಣೆ**

ನಾನು ಶಿವರಾಜು.ಹೆಚ್.ಎಸ್. ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನಾಗಮಂಗಲ ಆಪಾದಿಸುವುದೇನೆಂದರೆ,

ಮೇಲೆ ಹೇಳಲಾದ ಆರೋಪಿತರಾದ ನೀವು ದಿನಾಂಕ 15.08.2021 ರಂದು ಬೆಳಗ್ಗೆ 9.00 ಗಂಟೆಯ ಸಮಯದಲ್ಲಿ ಬೆಳ್ಳೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಕಂಚಿನಕೋಟೆ ಗ್ರಾಮದ ಚಾಸಾ 1 ರಾಮೇಗೌಡರವರಿಗೆ ಸೇರಿದ ಸರ್ವೇ ನಂಬರ್ 32 ರ ತೆಂಗಿನತೋಟದಲ್ಲಿ ಕೆಎ-44-ಟಿಎ-3826 ಸಂಖ್ಯೆಯ ಟ್ರ್ಯಾಕ್ಟರ್ ಮತ್ತು ಕೆಎ-44-ಟಿಎ-2725 ಸಂಖ್ಯೆಯ ಟ್ರೇಲರ್ ಅನ್ನು ನಿಲ್ಲಿಸಿಕೊಂಡು ತೆಂಗಿನಕಾಯಿಗಳು ಕೆಡವುತಿದ್ದುದ್ದನ್ನು ಚಾಸಾ 1 ರವರು ತಡೆಯಲು ಬಂದಾಗ ಚಾಸಾ 1 ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ತಡೆದು ನಿಲ್ಲಿಸಿದ್ದು, ಆ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 341 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

ಅಲ್ಲದೇ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ, ಸಮಾನ ಉದ್ದೇಶದಿಂದ ಮುಂದುವರೆದು, 1 ನೇ ಆರೋಪಿಯಾದ ನೀವು ನೀಲಗಿರಿ ದೊಣ್ಣೆಯಿಂದ ಚಾಸಾ1 ರವರ ಎಡಮಂಡಿಗೆ ಬಲವಾಗಿ ಹೊಡೆದಿದ್ದು, 2 ನೇ ಆರೋಪಿಯಾದ ನೀವು ನೀಲಗಿರಿ ದೊಣ್ಣೆಯಿಂದ ಚಾಸಾ 1 ರವರ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 324 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

ಅಲ್ಲದೇ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ, ಸಮಾನ ಉದ್ದೇಶದಿಂದ ಮುಂದುವರೆದು, 1 ನೇ ಆರೋಪಿಯಾದ ನೀವು ನೀಲಗಿರಿ ದೊಣ್ಣೆಯಿಂದ ಚಾಸಾ1 ರವರ ಎಡಮಂಡಿಗೆ ಬಲವಾಗಿ ಹೊಡೆದಿದ್ದು, 2 ನೇ ಆರೋಪಿಯಾದ ನೀವು ನೀಲಗಿರಿ ದೊಣ್ಣೆಯಿಂದ ಚಾಸಾ 1 ರವರ ಬೆನ್ನಿಗೆ ಹೊಡೆದು ತೀವ್ರ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 326 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

ಅಲ್ಲದೇ, ಆರೋಪಿತರಾದ ನೀವು, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ, ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಚಾಸಾ 1 ರವರಿಗೆ ಮಚ್ಚನ್ನು ತೋರಿಸಿ ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 506 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

## ಆಪಾದನೆ

ಪ್ರಶ್ನೆ.1:- ಈಗ ಮೇಲೆ ಓದಿ ಹೇಳಲಾದ ಆಪಾದನೆ ನಿಮಗೆ ತಿಳಿಯಿತೇ?

ಉತ್ತರ:-

1 ನೇ ಆರೋಪಿ

2 ನೇ ಆರೋಪಿ

ಪ್ರಶ್ನೆ.2:- ನೀವು ಆಪಾದನೆ ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರ:-

1 ನೇ ಆರೋಪಿ

2 ನೇ ಆರೋಪಿ

(ಸದರಿ ಆಪಾದನೆಯ ಸಾರಾಂಶವನ್ನು ಆರೋಪಿತರಿಗೆ ಓದಿ ತಿಳಿಸಿ ಹೇಳಿ ಅವರಿಂದ ಬಂದ ಉತ್ತರವನ್ನು ನನ್ನ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ 25-06-2025 ರಂದು ಬರೆದುಕೊಳ್ಳಲಾಯಿತು ಎಂದು ಪ್ರಮಾಣೀಕರಿಸಲಾಯಿತು)

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ, ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ :25.06.2025 ರಂದು ಓದಲಾಯಿತು. )

ದಿನಾಂಕ : 25-06-2025
ಸ್ಥಳ : ನಾಗಮಂಗಲ.

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ನಾಗಮಂಗಲ.

ಆರೋಪಿತರ ಸಹಿ:

1 ನೇ ಆರೋಪಿ

2 ನೇ ಆರೋಪಿ